ಯಾವಾಗಂದರೆ ಆಗ ಅಮೆರಿಕಕ್ಕೆ ಬಂದುಹೋಗಬಹುದು ಅನ್ನುವ ಸಲಹೆಯೂ ಬಂದಿತ್ತು ಸಮಾ ಗಳಿಸಿ ಒಟ್ಟುಹಾಕಿಕೊಂಡ ಗಂಡುಮಕ್ಕಳಿಂದ. ಆಸ್ತಿಮೇಲೆ ಕಣ್ಣಿರುವವರು ಇಲ್ಲಿ ಇದ್ದೇಇದ್ದಾರೆ. ಸಂಪೇಬೈಲಿನ ದಾಯಾದಿಯೇ ಸಾಕು. ಅಂದರೆ ತಮಗೆ ವಾಪಸು ಬರೋ ಆಲೋಚನೆಯಿಲ್ಲ ಅಂತಾನೆ ಅಲ್ವ ಅರ್ಥ? ಬೇಸರದಿಂದ ಫೋನು ಕೆಳಗೆ ಹಾಕಿಬಿಟ್ಟಿದ್ದರು ಅವತ್ತು. ಇಂತದೆಲ್ಲ ಎಡವಟ್ಟು ಮಾಡಿಕೊಂಡು ಆಧಾರವಿಲ್ಲದೆ ಶಹರ ಮತ್ತಿವರ ನಡುವೆ ಅಂತರ್‌ಪಿಶಾಚವಾಗಿ ನೇತಾಡುತ್ತಿರಬೇಕೆ ತಾವಿಬ್ಬರು? 'ನೋಡೆ ಗೌರಾ, ನಮಗು ಸಂಪತ್ತಿದೆ; ನಮ್ಮಕ್ಕಳಿಗೂ ಸಂಪತ್ತಿದೆ. ಆದರೆ ಮನಸ್ಸೇಕೆ ಹೀಗೆ ದರಿದ್ರವಾಗಿ ನರಳುತ್ತಿದೆ? ಈ ಸಮೃದ್ಧಿಯೆ ಇದಕ್ಕೆಲ್ಲ ಕಾರಣವೇನೆ?' ಅಸಹಾಯರಾಗಿ ಅಲವತ್ತುಕೊಂಡಿದ್ದರು. ಎದ್ದಲ್ಲಿ ಕುಂತಲ್ಲಿ ತಲೆಹಾಕಿ ಕೆಣಕುವ ಕರ್ಕರೆ ಪ್ರಸನ್ನತೆಗೆ ಶತ್ರುವಾಗಿತ್ತು.

'ಏನು ಮಾಡೂದೋ ತಿಳೀತಿಲ್ಲಲ ವಡೇರೆ...' ಮುತ್ತಾಚಾರಿ ಕೈಹಿಸುಕಿಕೊಳ್ಳುತ್ತ ಕುಳಿತಿದ್ದ. ಬರುಬರುತ್ತ ಆತ ಅದನ್ನ ತನ್ನ ಸಮಸ್ಯೆ ಅಂತಲೆ ಪರಿಗಣಿಸಿಬಿಟ್ಟಿದ್ದ. ಅವನಷ್ಟೇ ಬೇಸರದಲ್ಲಿದ್ದ ರಾಮಣ್ಣ ಎದ್ದುಹೋಗಿ ಕ್ಯಾಮರ ತಂದು ಅಲ್ಲಿಯ ಫೋಟೊ ತೋರಿಸುತ್ತ, '...ಖುಷಿಯಲ್ಲರಳುವ ಜೀವಿಗಳ ಸದ್ದು ಗಲಾಟೆಗಳೂ ಪರಿಸರದಲ್ಲಿ ಹೇಗೆ ಪ್ರಸನ್ನತೆಯನ್ನು ಹರಡುತ್ತದೆ ನೋಡು...' ಅನ್ನುತ್ತ ಭಾವುಕರಾದರು. ಅದನ್ನ ನೋಡುತ್ತ ನೋಡುತ್ತ ಆಚಾರಿ ಏನೋ ಹೊಳೆದು ಸಂಭ್ರಮಿಸುತ್ತ ಎದ್ದುನಿಂತ. 'ಅಲ್ಲ... ಹೀಗೆ ಮಾಡಿದ್ರೆ ಹ್ಯಾಗೆ...' ಹಾವಭಾವ ಕೈಚಲನೆಯೊಂದಿಗೆ ತೀವ್ರವಾಗಿ ಕಲ್ಪಿಸಿಕೊಳ್ಳುತ್ತ 'ಅಲ್ಲ, ಗಟ್ಟಿಮರದಲ್ಲಿ ನಾವೇ ಗಾಣ ತಯಾರುಮಾಡಿದ್ರೆ ಹ್ಯಾಗೆ? ಎಲ್ಲೆಲ್ಲಾ ಹುಡುಕೋ ಬದಲು ಇಲ್ಲೆ ಮಾಡುವ. ನೀವು ಹೂಂ ಅಂದ್ರೆ ಈ ಕೆಲಸ ನಂಗೆ ಬಿಡಿ' ಅಂತ ಚಿಟಿಕೆ ಹೊಡೆದ. ಈ ಹೊಸ ಸಾಧ್ಯತೆಯ ಆಲೋಚನೆಗೆ ಇಬ್ಬರಿಗೂ ರೋಮಾಂಚನವಾಗಿ ಕುಣಿಯುವಂತಾಯಿತು. 'ಮಾಡೋಕೆ ಸಾಧ್ಯ ಅಂತೀಯ ಹಾಗಿದ್ರೆ?' ಅಂತ ಮತ್ತೆ ಕೇಳಿದವರಿಗೆ 'ಅದನ್ನು ನನಗೆ ಬಿಡಿ, ಮರದ್ದು ನಿಮಗೆ ಒಪ್ಪಿಗೆಯಾ ಹೇಳಿ ಸಾಕು' ಅಂದ. 'ಅಲ್ಲಿ ನಡೆಯುತ್ತದಾದರೆ ಇಲ್ಯಾಕಿಲ್ಲ? ನೋಡುವ' ಅಂತ ಕೈ ತಟ್ಟಿದರು ರಾಮಣ್ಣ. 'ಇದಕ್ಕೆಲ್ಲ ಸಾಗವಾನಿ, ಬೀಟೆ ಜಾತಿಮರ ಉಪಯೋಗವಿಲ್ಲ. ನಾರುಜಾತಿ ಮರವೆ ಬೇಕು. ನಾ ನೋಡಕಂತೇನೆ, ನೀವು ಚಿಂತೆ ಬಿಡಿ' ಎದೆ ತಟ್ಟಿಕೊಂಡು ಹೊರಟುಹೋದ. ಮರುದಿನ ಬಂದವ ಕ್ಯಾಮರಾದಲ್ಲಿ ಮತ್ತೆ ಫೋಟೊ ನೋಡಿ ಪೆನ್ಸಿಲಿನಲ್ಲಿ ಏನೇನೋ ಗೀಚಿಕೊಂಡು ಹೋದವ ಮೂರುದಿನವಾದರು ಈ ಕಡೆ ತಲೆಹಾಕದೆ ನಾಪತ್ತೆಯಾದ. ತಡೆಯಲಾಗದೆ ಅವನ ಮನೆಗೆ ಹೋದರು ರಾಮಣ್ಣ. ಬಚ್ಚಲುಮನೆಗೆ ತಾಗಿದ್ದ ತೊಂಡೇಬಳ್ಳಿ, ಬಸಳೆ, ಹರಿವೆಗಿಡಗಳಾಚೆ ಸೋಗೆ ಹೊದೆಸಿದ ಹಳೆಚಪ್ಪರದಲ್ಲಿ ಕುಳಿತಿದ್ದ ಮುತ್ತಾಚಾರಿ. ಅವನೆದುರು ಮೂರು ಮರದ ದಿಂಡುಗಳಿದ್ದುವು. ಎರಡಡಿ ಎತ್ತರಕ್ಕೆ, ಒಂದರ ವ್ಯಾಸ ಉಳಿದೆರಡಕ್ಕಿಂತ ಜಾಸ್ತಿಯಿದ್ದು, ಬಿಳಿಕಂದು ಬಣ್ಣದಲ್ಲಿದ್ದ ಅವು ಯಾವ ಜಾತಿ ಮರ ಅಂತ ಗುರುತಿಸಲಾಗುತ್ತಿರಲಿಲ್ಲ. ನಡುವೆ ಗೇಣು ಜಾಗ ಬಿಟ್ಟು ಮೇಲಿಂದ ಕೆಳಗೆ ಬಾಗುರೇಖೆಗಳನ್ನು ಕೊರೆಯುತ್ತ, ಯಾರೋ ಬಂದದ್ದನ್ನೂ ಗಮನಿಸದಷ್ಟು ಮುಳುಗಿಹೋಗಿದ್ದ. ವರ್ಷಗಳಿಂದ ಭೂಗತವಾಗಿ ಬಿದ್ದಿದ್ದ ವಿವಿಧ ಆಕಾರದ ಹತ್ಯಾರಗಳು ದೂಳೊರೆಸಿಕೊಂಡು ಹೊಳೆಯುತ್ತ ರಾಶಿ ಬಿದ್ದಿದ್ದುವು. ಅವುಗಳಿಗು ಮರದ ದಿಂಡುಗಳಿಗು ಹಚ್ಚಿದ ಕುಂಕುಮ ದೇವರಿಗೆ ಪೂಜೆಯಾಗಿದ್ದನ್ನು ಸಾರಿತು. ಮರುದಿನ ನೋಡಿದರೆ ಆತ ರಾತ್ರಿಯೂ ಮಲಗಿದಂತೆ ಕಾಣಲಿಲ್ಲ. ಗಾಣದ ಒಂದು ಕಣೆ ಮುಕ್ಕಾಲುಪಾಲು ರೂಪುಗೊಂಡಿತ್ತು. ಮೇಲೆ ಕೆಳಗೆ ಅಳತೆಮಾಡಿ